ದಿಃ 12-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಡಿ.ಎನ್ . ವಾದಿ ಪರ ವಕೀಲರಿಂದಃ

ನಾನು ಪಿ.ಯು.ಸಿ ಯ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನ್ಯಾಯಾಲಯದ ಆದೇಶಗಳು ಹಾಗೂ ಅದರ ಉಲ್ಲಂಘನೆಯ ಪರಿಣಾಮಗಳ ಬಗ್ಗೆ ನನಗೆ ಅರಿವು ಇದೆ ಎಂದರೆ ಸರಿ. 1,2,5 ರಿಂದ 7 ನೇ ಪ್ರತಿವಾದಿಗಳು ನನ್ನ ಸಂಬಂಧಿಕರು ಹಾಗೂ ಅವರು ನನ್ನ ದೊಡ್ಡಪ್ಪ-ಚಿಕ್ಕಪ್ಪನ ಮಕ್ಕಳು. ಸಾಕ್ಷಿಯು ಮುಂದುವರೆದು ವಾದಿಯೂ ಸಹ ನನ್ನ ಸಂಬಂಧಿಕರು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಇತರೆ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳು ಮತ್ತು ನಾನು ವಿಭಾಗವನ್ನು ಮಾಡಿಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಪೂರ್ವಜರು ವಿಭಾಗ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ಸದರಿ ವಿಭಾಗದ ಮೂಲಕ ಅಸ್ಸೆಸ್‌ಮೆಂಟ್ ನಂ. 109 ರ ಆಸ್ತಿಯು 1 ನೇ ಪ್ರತಿವಾದಿಗೆ ಸೇರಿತ್ತು ಎಂದು ತೋರಿಸುವ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸದರಿ ಸ್ವತ್ತು ಪ್ರತಿವಾದಿಗೆ ಹೇಗೆ ಬಂತು ಎಂಬುದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ಅಸ್ಸೆಸ್‌ಮೆಂಟ್ ನಂ. 109 ರ ಸ್ವತ್ತಿನ ಹಕ್ಕು ಮತ್ತು ಸ್ವಾಧೀನ ಹೊಂದಿದ್ದಾರೆ ಎಂದು ತೋರಿಸುವ ಪಂಚಾಯತ್ ಪರವಾನಗಿ ಮತ್ತು ಖಾತಾ ದಾಖಲೆಯನ್ನು ನಾನು ನೋಡಿದ್ದೇನೆ. ಸದರಿ 2 ದಾಖಲೆಗಳನ್ನು ಹೊರತುಪಡಿಸಿ ಹಕ್ಕನ್ನು ಪ್ರತಿಪಾದಿಸುವ ಅಥವಾ ಖಚಿತಗೊಳಿಸುವ ಇತರೆ ದಾಖಲೆಯನ್ನು ನಾನು ನೋಡಿರುವುದಿಲ್ಲ. ಅಸ್ಸೆಸ್‌ಮೆಂಟ್ ನಂ. 109 ರ ಸ್ವತ್ತಿಗೆ ಸಂಬಂಧಪಟ್ಟಂತೆ ಹಕ್ಕನ್ನು ಪ್ರತಿಪಾದಿಸುವ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಲು ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿಗಳು ಸದರಿ ದಾಖಲೆಯನ್ನು ಈಗಾಗಲೇ ಹಾಜರುಪಡಿಸಿದ್ದಾರೆ ಎಂದು ನನಗೆ ತಿಳಿಸಿದರು ಎಂದು ನುಡಿಯುತ್ತಾರೆ. ನಿಡಿ-1 ರಿಂದ 7 ರ ದಾಖಲೆಗಳ ಪೈಕಿ ಹಕ್ಕನ್ನು ಪ್ರತಿಪಾದಿಸುವ ದಾಖಲೆ ಯಾವುದೂ ಇರುವುದಿಲ್ಲ ಎಂದರೆ ಸರಿ.

ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ವಾದಿಯು ಸಲ್ಲಿಸಿರುವ ಅರ್ಜಿಯಲ್ಲಿ ಬರೆದಿರುವ ಅಂಶಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ಇತರ ಪ್ರತಿವಾದಿಗಳ ಪರ ಸಾಕ್ಷಿ ನುಡಿಯಲು ಅವರು ನನಗೆ ಯಾವುದೇ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಮಾಹಿತಿಗಳನ್ನು

ನಾನೇ ಹೇಳಿ ಬರೆಸಿರುತ್ತೇನೆ. ಇತರೆ ಪ್ರತಿವಾದಿಗಳ ಪರ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸರಿ. ಇತರೆ ಪ್ರತಿವಾದಿಗಳ ಪರ ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯೇ ನನ್ನನ್ನು ಈ ದಾವೆಯಲ್ಲಿ ಪ್ರತಿವಾದಿಯಾಗಿ ಸೇರಿಸಿದ್ದಾರೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶ ಮತ್ತು ಕಾನೂನನ್ನು ಉಲ್ಲಂಘನೆ ಮಾಡಿದ ಕಾರಣ ಸದರಿ ವಿಚಾರಕ್ಕೆ ಸೀಮಿತವಾಗಿ ನನ್ನನ್ನು ಈ ದಾವೆಯಲ್ಲಿ ಪ್ರತಿವಾದಿಯನ್ನಾಗಿ ಸೇರಿಸಲಾಯಿತು ವಿನಃ ಇತರೆ ಪ್ರತಿವಾದಿಗಳ ಪರ ಸಾಕ್ಷಿ ನುಡಿಯಲು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ 2 ನೇ ಪುಟದಲ್ಲಿ ತಿಳಿಸಿರುವಂತೆ ದಿನಾಂಕ 29-08-2009 ರಂದು ಆದ ಆದೇಶದ 7 ನೇ ಪುಟದಲ್ಲಿ ಬರೆದಿರುವ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ.  ಈ ಹಂತದಲ್ಲಿ ಸಾಕ್ಷಿಗೆ ಆದೇಶದ ಪ್ರತಿಯನ್ನು ತೋರಿಸಲಾಯಿತು, ಆದರೆ ಸದರಿ ಆದೇಶವು ಆಂಗ್ಲ ಭಾಷೆಯಲ್ಲಿರುವ ಕಾರಣ ಅದನ್ನು ಓದಲು ತನಗೆ ಸಾಧ್ಯವಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಸಾಮಾನ್ಯವಾಗಿ ಪಿ.ಯು.ಸಿ ಯವರೆಗೆ ವಿದ್ಯಾಭ್ಯಾಸ ಮಾಡಿದವರಿಗೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿಯಲ್ಲ. ನನಗೆ ಆಂಗ್ಲ ಭಾಷೆಯಲ್ಲಿ ಓದಲು ಗೊತ್ತಿದ್ದರೂ ಗೊತ್ತಿಲ್ಲವೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸ್ಸೆಸ್ ಮೆಂಟ್ ನಂ. 107 ರ ಸ್ವತ್ತಿಗೆ ತೊಂದರೆ ನೀಡಬಾರದು ಹಾಗೂ ಅದರಲ್ಲಿ ಕಟ್ಟಡವನ್ನು ನಿರ್ಮಿಸಬಹುದು ಎಂದು ಸದರಿ ಆದೇಶದಲ್ಲಿ ನ್ಯಾಯಾಲಯವು ಆದೇಶಿಸಿದೆ ಎಂದರೆ ಸಾಕ್ಷಿ ಅಸ್ಸೆಸ್‌ಮೆಂಟ್ ನಂ. 109 ರಲ್ಲಿ ಕಟ್ಟಡವನ್ನು ನಿರ್ಮಿಸಬಹುದು ಎಂದು ನನ್ನ ವಕೀಲರು ನನಗೆ ತಿಳಿಸಿದರು ಎಂದು ನುಡಿಯುತ್ತಾರೆ. ಪೂ-ಪಂಚಾಯತ್ ಆಸ್ತಿ, ಪ-ಸಾರ್ವಜನಿಕ ರಸ್ತೆ, ಉ-ಜಿ. ಕೃಷ್ಣಪ್ಪರವರ ನಿವೇಶನ  ಹಾಗೂ ದ-ಗೋವಿದಪ್ಪರವರ ನಿವೇಶನ ಈ ಮಧ್ಯೆ ಇರುವ ಸ್ವತ್ತಿಗೆ ಅಕ್ರಮ ಪ್ರವೇಶ ಮಾಡಬಾರದು ಹಾಗೂ ಅದರಲ್ಲಿ ಕಟ್ಟಡವನ್ನು ನಿರ್ಮಿಸಬಾರದು ಎಂದು ನ್ಯಾಯಾಲಯವು ಆದೇಶಿಸಿದೆ ಎಂದರೆ ಸರಿಯಲ್ಲ.

ನಿಪಿ-9 ರ ಛಾಯಾಚಿತ್ರದಲ್ಲಿ ಪಾಯ ಹಾಕಿರುವುದು ಕಾಣಿಸುತ್ತಿದೆ ಎಂದರೆ ಸರಿ. ಅಸ್ಸೆಸ್‌ಮೆಂಟ್ ನಂ. 107 ಮತ್ತು 109 ರ ನಿವೇಶನಗಳ  ಮಧ್ಯೆ ಎಷ್ಟು ಅಂತರವಿದೆ ಎಂಬುದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಆದೇಶದ ಪ್ರಕಾರ ಪೂ-ಪಂಚಾಯಿತಿ ಜಾಗ

ಎಂದು ಇದೆ ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಪೂರ್ವಕ್ಕೆ ಗಂಗಾಧರಪ್ಪ ರವರ ಮನೆ ಇದೆ ಎಂದು ನುಡಿಯುತ್ತಾರೆ. ಅಸ್ಸೆಸ್‌ಮೆಂಟ್ ನಂ. 107 ರ ಪೂರ್ವಕ್ಕೆ ಗಂಗಾಧರಪ್ಪ ರವರ ಮನೆ ಇರುವುದಿಲ್ಲ ಎಂದರೆ ಸಾಕ್ಷಿ ನಾರಾಯಣಪ್ಪ ಮತ್ತು ಕೃಷ್ಣಪ್ಪ ರವರ ಮನೆ ಇದೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶದ 6 ನೇ ಪುಟದಲ್ಲಿ ಪೂರ್ವಕ್ಕೆ ಸರ್ವೆ ನಂ. ಜಾಗ, ಪಶ್ಚಿಮಕ್ಕೆ ಪಂಚಾಯಿತಿ ನಿವೇಶನ, ಉತ್ತರಕ್ಕೆ ವಾದಿಯ ತಂದೆಯ ಜಾಗ ಹಾಗೂ ದಕ್ಷಿಣಕ್ಕೆ ರಸ್ತೆ ಎಂದು ತೋರಿಸಿರುವ ಚೆಕ್ಕುಬಂದಿಯ ಮಧ್ಯೆ ಇರುವ ಆಸ್ತಿಯು ಪ್ರತಿವಾದಿಗಳಿಗೆ ಸೇರಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಚೆಕ್ಕುಬಂದಿ ತಪ್ಪಾಗಿರುತ್ತದೆ ಹಾಗೂ ಈಗ ಅಲ್ಲಿ ಮನೆಗಳು ನಿರ್ಮಾಣವಾಗಿವೆ ಎಂದು ನುಡಿಯುತ್ತಾರೆ. ಸದರಿ ಚೆಕ್ಕುಬಂದಿ ಅಸ್ಸೆಸ್‌ಮೆಂಟ್ ನಂ. 109 ಕ್ಕೆ ಸಂಬಂಧಪಟ್ಟ ಚೆಕ್ಕುಬಂದಿ ಆಗಿರುವುದಿಲ್ಲ ಎಂದರೆ ಸಾಕ್ಷಿ ಪೂರ್ವ ಮತ್ತು ದಕ್ಷಿಣದ ಚೆಕ್ಕುಬಂದಿ ಸರಿಯಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಪಶ್ಚಿಮಕ್ಕೆ 107 ಮತ್ತು 108 ರ ನಿವೇಶನಗಳು ಹಾಗೂ ಉತ್ರರಕ್ಕೆ ಪಿ.ವಿ ಗಂಗಾಧರಪ್ಪ ರವರ ಮನೆ ಬರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಹಾಜರುಪಡಿಸಿರುವ ದಾಖಲೆಗಳಲ್ಲಿ ಚೆಕ್ಕುಬಂದಿ ತಪ್ಪಾಗಿದೆ ಎಂದು ನ್ಯಾಯಾಲಯವು ತನ್ನ ಆದೇಶದಲ್ಲಿ ಗಮನಿಸಿದೆ ಎಂದರೆ ಗೊತ್ತಿಲ್ಲ. ಖಾತಾ ದಾಖಲೆಯೇ ಸರಿ ಇರುವುದಿಲ್ಲವೆಂದು ಒಪ್ಪಿಕೊಳ್ಳುವಿರಾ ಎಂಬ ಪ್ರಶ್ನೆಗೆ ಸಾಕ್ಷಿ ಒಪ್ಪಿಕೊಳ್ಳುವುದಿಲ್ಲ ಎಂದು ನುಡಿಯುತ್ತಾರೆ. ಅಸ್ಸೆಸ್‌ಮೆಂಟ್ ನಂ. 109 ರ ಖಾತಾ ದಾಖಲೆಯಲ್ಲಿ ತೋರಿಸಿರುವ ಚೆಕ್ಕುಬಂದಿ ಸರಿಯಾಗಿದೆ ಎಂದರೆ ಸರಿ. ಅಸ್ಸೆಸ್‌ಮೆಂಟ್ ನಂ. 107 ರ ಪೂರ್ವ ದಿಕ್ಕಿನ ಜಾಗವನ್ನು ಒತ್ತುವರಿ ಮಾಡಿಕೊಂಡು ನನ್ನ ಸಹಕಾರದೊಂದಿಗೆ 1 ಮತ್ತು 2 ನೇ ಪ್ರತಿವಾದಿಗಳು ಅಕ್ರಮವಾಗಿ ಮನೆಯನ್ನು ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಅಸ್ಸೆಸ್ ಮೆಂಟ್ ನಂ. 107 ರ ಪೂರ್ವ ದಿಕ್ಕಿಗೆ ನಾವು ಮನೆಯನ್ನು ಕಟ್ಟುತ್ತಿದ್ದೇವೆ ಎಂದರೆ ಸರಿ. ಪ್ರತಿವಾದಿಗಳ ದಾಖಲೆಗಳ ಪ್ರಕಾರ ಅಸ್ಸೆಸ್‌ಮೆಂಟ್ ನಂ. 109 ರ ದಕ್ಷಿಣ ದಿಕ್ಕಿಗೆ ಅಸ್ಸೆಸ್ ಮೆಂಟ್ ನಂ. 107 ರ ನಿವೇಶನ ಬರುವುದಿಲ್ಲ ಎಂದರೆ ಸರಿಯಲ್ಲ.

ಅಸ್ಸೆಸ್‌ಮೆಂಟ್ ನಂ. 107 ರಲ್ಲಿ ಅಕ್ರಮ ಪ್ರವೇಶ ಮಾಡುವುದಾಗಲೀ ಅಥವಾ ಅದರಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿ ಮನೆಯನ್ನು ಕಟ್ಟಬಾರದೆಂದು ದಿನಾಂಕ 03-07-2009 ರಲ್ಲಿ ಈ ನ್ಯಾಯಾಲಯದಲ್ಲಿ ಆದೇಶವಾಗಿದೆ ಎಂದರೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಪಾಯವನ್ನು 2 ನೇ ಪ್ರತಿವಾದಿಯು 2008 ರಲ್ಲಿ

ಹಾಕಿರುತ್ತಾರೆ. ಮನೆಯನ್ನು ಕಟ್ಟಬಾರದು ಎಂದು ವಾದಿಯು ಅರ್ಜಿಯನ್ನು ಸಲ್ಲಿಸಿರುವ ವಿಚಾರವನ್ನು 2 ನೇ ಪ್ರತಿವಾದಿಯು ನನಗೆ ತಿಳಿಸಿದ್ದರು. ದಾವೆಯಲ್ಲಿ ತಕರಾರನ್ನು ಸಲ್ಲಿಸಿದ ನಂತರ ಆದ ಆದೇಶದ ವಿಚಾರಗಳು ನನಗೆ ತಿಳಿದಿದೆ. ಅಸ್ಸೆಸ್‌ಮೆಂಟ್ ನಂ. 109 ರಲ್ಲಿ ಮನೆಯನ್ನು ಕಟ್ಟಬಹುದು ಎಂದು ನ್ಯಾಯಾಲಯವು ಸ್ಪಷ್ಟವಾಗಿ ಯಾವುದೇ ಆದೇಶವನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿ ಮನೆಯನ್ನು ಕಟ್ಟಬಹುದು ಎಂದು ನನ್ನ ವಕೀಲರು ನನಗೆ ತಿಳಿಸಿದರು ಎಂದು ನುಡಿಯುತ್ತಾರೆ. ದಾವೆಯನ್ನು ಹೂಡಿದ ನಂತರ ಏಕಪಕ್ಷೀಯ ಆದೇಶವಾದ ದಿನದಿಂದ ಮಧ್ಯಂತರ ಅರ್ಜಿಯ ಮೇಲೆ ಆದೇಶ ಆಗುವವರೆಗೆ ಮನೆಯ ನಿರ್ಮಾಣವನ್ನು ನಿಲ್ಲಿಸಿದ್ದರು ಹಾಗೂ ಸಾಕ್ಷಿ ವಿಚಾರಣೆ ಪ್ರಾರಂಭವಾದ ನಂತರ ಮನೆಯನ್ನು ನಿರ್ಮಿಸಲು ಪುನರಾರಂಭಿಸಿದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು 1 ವರ್ಷದ ಕಾಲ ಮನೆಯ ನಿರ್ಮಾಣವನ್ನು ನಿಲ್ಲಿಸಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಏಕಪಕ್ಷೀಯ ಆದೇಶ ಆದ ದಿನದಿಂದ ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನದವರೆಗೆ ಮನೆಯ ನಿರ್ಮಾಣವನ್ನು ನಿಲ್ಲಿಸಿದ್ದರು ಎಂದು ನುಡಿಯು ತ್ತಾರೆ. ಸದರಿ ಅವಧಿಯಲ್ಲಿ ನಾನು ಜಿಲ್ಲಾ ಪಂಚಾಯಿತಿಯ ಸದಸ್ಯನಾಗಿದ್ದೆನು ಎಂದರೆ ಸರಿ. ಜಿಲ್ಲಾ ಪಂಚಾಯಿತಿಯ ಸದಸ್ಯನಾಗಿದ್ದಾಗ ನನ್ನ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಸದರಿ ಮನೆಯನ್ನು ಕಟ್ಟಿಸಿದೆನು ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯ ಹೆಸರಿನಲ್ಲಿ ನೀರಾವರಿ ಜಮೀನು ಮತ್ತು ಬೋರ್ವೆಲ್ ಇದೆ ಎಂದರೆ ಸಾಕ್ಷಿ 2 ನೇ ಪ್ರತಿವಾದಿಯ ಅತ್ತೆಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು ಕೃಷ್ಣಪ್ಪ ರವರ ಸೊಸೆಯಾದ ಕಾರಣ ಅವರು ಕುಟುಂಬದ ಸದಸ್ಯರಾಗಿದ್ದು ಸದರಿ ನೀರಾವರಿ ಜಮೀನು ಮತ್ತು ಬೋರ್ವೆಲ್ ಸಹ ಕುಟುಂಬಕ್ಕೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯು ಆರ್ಥಿಕವಾಗಿ ಸಿರಿವಂತರಾಗಿರುವ ಕಾರಣ ಅವರು ಸರ್ಕಾರದಿಂದ ಆಶ್ರಯ ಯೋಜನೆಯಡಿ ಪರಿಹಾರವನ್ನು ಪಡೆದುಕೊಳ್ಳಲು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಭಾವವನ್ನು ದುರ್ಬಳಕೆ ಮಾಡಿಕೊಂಡು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಅಕ್ರಮವಾಗಿ ಮನೆಯನ್ನು ನಿರ್ಮಾಣ ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

ನನಗೆ ಕನ್ನಡ ಭಾಷೆಯಲ್ಲಿ ಓದಲು ಮತ್ತು ಬರೆಯಲು ಬರುತ್ತದೆ. ಅಸ್ಸೆಸ್‌ಮೆಂಟ್ ನಂ. 107 ರ ಪಶ್ಚಿಮಕ್ಕೆ ಸರ್ಕಾರಿ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯ ಅಗಲ ನನಗೆ

ಗೊತ್ತಿಲ್ಲ. ಸದರಿ ರಸ್ತೆಯು 20 ಅಡಿ ಅಗಲದ ರಸ್ತೆಯಾಗಿರುತ್ತದೆ ಎಂದರೆ ಇರಬಹುದು. ನಿಪಿ-20 ರ ಆದೇಶದ ಆಧಾರದ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಬಂದು ಅಳತೆ ಮಾಡಿ ಸದರಿ ರಸ್ತೆಯು 20 ಅಡಿ ಅಗಲದ ರಸ್ತೆ ಎಂದು ಖಚಿತಪಡಿಸಿಕೊಂಡರು ಎಂದರೆ ಗೊತ್ತಿಲ್ಲ. ಸದರಿ ರಸ್ತೆಯ ಅಳತೆಯ ಸಂದರ್ಭದಲ್ಲಿ ನಾನು ಹಾಜರಿದ್ದೆನು ಹಾಗೂ ಅಸ್ಸೆಸ್ ಮೆಂಟ್ ನಂ. 107 ರಲ್ಲಿ ಒತ್ತುವರಿಯಾಗಿದೆ ಎಂದು ಕಂಡುಬಂದಿತು ಎಂದರೆ ಸರಿಯಲ್ಲ. ಸದರಿ ವಿಚಾರಗಳು ನನಗೆ ವೈಯಕ್ತಿಕವಾಗಿ ತಿಳಿದಿದ್ದರೂ ಸಹ ವಾದಿಗೆ ತೊಂದರೆ ನೀಡಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯ ಹೆಸರಿಗೆ ನೀಡಲಾಯಿತು ಎಂದು ಹೇಳುವ ಕಟ್ಟಡ ನಿರ್ಮಾಣ ಪರವಾನಗಿಯನ್ನು ನಾನು ಕಣ್ಣಾರೆ ನೋಡಿದ್ದೆನು. 2 ನೇ ಪ್ರತಿವಾದಿಯ ಹೆಸರಿಗೆ ನೀಡಿದ ಖಾತೆಯಲ್ಲಿರುವ ಚೆಕ್ಕುಬಂದಿಗೂ ಕಟ್ಟಡ ನಿರ್ಮಾಣ ಪರವಾನಗಿಯಲ್ಲಿರುವ ಚೆಕ್ಕುಬಂದಿಗೂ ತಾಳೆ ಇರುವುದಿಲ್ಲ ಹಾಗೂ ವ್ಯತ್ಯಾಸಗಳಿವೆ ಎಂದರೆ ಗೊತ್ತಿಲ್ಲ. ಕಟ್ಟಡ ನಿರ್ಮಾಣ ಪರವಾನಗಿಯನ್ನು ನೀಡಿದಾಗ ಖಾತಾ ದಾಖಲೆಯನ್ನು ನಾನು ನೋಡಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

P.M Sachin

Digitally signed by P.M Sachin
Date: 2025.03.15 16:26:12 +0530

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು